ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-03-1995.

# *ಸರ್ವ ಪ್ರಾಪ್ತಿ ಸಂಪನ್ನ ಆತ್ಮನ ಚಿಹ್ನೆ ಸಂತುಷ್ಟತೆ ಹಾಗೂ ಪ್ರಸನ್ನತೆ.*

(सर्व प्राप्ति सम्पन्न आत्मा की निशानी - सन्तुष्टता और प्रसन्नता)

ಇಂದು ಸರ್ವಪ್ರಾಪ್ತಿಗಳನ್ನು ರೂಪಿಸುವಂತಹ ಬಾಪ್‌ದಾದಾರವರು ತನ್ನ ನಾಲ್ಕೂಕಡೆಯಲ್ಲಿರುವ ಪ್ರಾಪ್ತಿ ಸಂಪನ್ನ ಮಕ್ಕಳನ್ನು ನೋಡುತ್ತಿದ್ದಾರೆ. ಸರ್ವಪ್ರಾಪ್ತಿಗಳ ದಾತಾ ಸಂಪನ್ನ-ಸಂಪೂರ್ಣ ತಂದೆಯ ಮಕ್ಕಳು ಎಂದಾಗ ಪ್ರತಿಯೊಂದು ಮಕ್ಕಳಿಗೂ ಸಹ ತಂದೆಯವರು ಸರ್ವ ಪ್ರಾಪ್ತಿಗಳ ಆಸ್ತಿ(ವಾರಸತ್ವ)ಯನ್ನು ಕೊಟ್ಟಿದ್ದಾರೆ. ಕೆಲವರಿಗೆ 10 ಕೊಟ್ಟು, ಕೆಲವರಿಗೆ 20ರಷ್ಟು ಕೊಟ್ಟಿದ್ದಾರೆ ಎಂದಲ್ಲ. ಸರ್ವ ಮಕ್ಕಳಿಗೂ ಸರ್ವ ಪ್ರಾಪ್ತಿಗಳ ಅಧಿಕಾರವನ್ನು ಕೊಟ್ಟಿದ್ದಾರೆ. ಸರ್ವ ಮಕ್ಕಳು ಸಂಪೂರ್ಣ ವಾರಸತ್ವಕ್ಕೆ ಅಧಿಕಾರಿ ಆಗಿದ್ದಾರೆ. ಆದ್ದರಿಂದ ಬಾಪ್‌ದಾದಾರವರು ನೋಡುತ್ತಿದ್ದರು- ಪ್ರತಿಯೊಬ್ಬ ಅಧಿಕಾರಿ ಮಕ್ಕಳು ತನ್ನಲ್ಲಿ ಪ್ರಾಪ್ತಿಗಳ ಅಧಿಕಾರವನ್ನೆಷ್ಟು ಸ್ವಂತ ಮಾಡಿಕೊಂಡಿದ್ದಾರೆ ಎಂದು. ಪ್ರಾಪ್ತಿಗಳ ಅಧಿಕಾರವನ್ನು ತಂದೆಯವರು ಎಲ್ಲವನ್ನೂ ಕೊಟ್ಟಿದ್ದಾರೆ. ತಂದೆಯವರಿಗೆ ಸರ್ವಶಕ್ತಿವಂತ ಅಥವಾ ಸಂಪನ್ನ ಸಾಗರನೆಂದು ಹೇಳಲಾಗುತ್ತದೆ. ಆದರೆ ಮಕ್ಕಳು ಆ ಪ್ರಾಪ್ತಿಗಳನ್ನು ಎಲ್ಲಿಯವರೆಗೆ ತಮ್ಮದಾಗಿಸಿಕೊಂಡಿದ್ದಾರೆ? ತಂದೆ ಕೊಟ್ಟಿರುವ ವಾರಸತ್ವವನ್ನು ಎಷ್ಟು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆಯೋ ಅಷ್ಟು ಇದು ನನ್ನ ಖಜಾನೆಯೆಂದು ನಶೆ ಹಾಗೂ ಖುಷಿಯಿರುತ್ತದೆ. ಕೊಟ್ಟಿರುವುದಂತು ತಂದೆಯವರು ಆದರೆ ಅವುಗಳನ್ನು ಧಾರಣೆ ಮಾಡಿ ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಇದರಲ್ಲಿ ಏನು ನೋಡಿದರು? ತಮ್ಮದನ್ನಾಗಿ ಮಾಡಿಕೊಳ್ಳುವುದರಲ್ಲಿ ನಂಬರ್‌ವಾರ್ ಆಗಿಬಿಟ್ಟಿದ್ದಾರೆ. ತಂದೆಯು ಇಂತಿಂತಹ ನಂಬರ್ ಎಂದು ಮಾಡಿಲ್ಲ ಆದರೆ ತಮ್ಮ-ತಮ್ಮ ಧಾರಣೆಯ ಯಥಾಶಕ್ತಿಯು ನಂಬರ್‌ವಾರ್ ಮಾಡಿಬಿಟ್ಟದೆ ಸಂಪೂರ್ಣ ಅಧಿಕಾರ ಅಥವಾ ಸರ್ವ ಪ್ರಾಪ್ತಿಗಳಿಂದ ಸಂಪನ್ನವಾದ ಆತ್ಮನು ಸದಾ ಅಮೃತವೇಳೆಯಿಂದ ರಾತ್ರಿಯವರೆಗೂ ಪ್ರಾಪ್ತಿಗಳ ನಶೆ ಅಥವಾ ಅನುಭವದಲ್ಲಿಯೇ ಇರುತ್ತಾರೆ. ಅಂತಹವರ ಲಕ್ಷಣ/ಚಿಹ್ನೆಯು ಏನಾಗಿರುತ್ತದೆ? ಪ್ರಾಪ್ತಿಗಳ ಚಿಹ್ನೆಯು ಸಂತುಷ್ಟವಾಗಿರುವುದಾಗಿದೆ. ಅವರು ಸದಾ ಸಂತುಷ್ಟಮಣಿ ಆಗಿದ್ದು ಅನ್ಯರಿಗೂ ಸಂತುಷ್ಟತೆಯ ಪ್ರಕಂಪನಗಳನ್ನು ಹರಡಿಸುತ್ತಾ ಇರುತ್ತಾರೆ. ಅವರ ಚಹರೆಯು ಸದಾ ಪ್ರಸನ್ನಚಿತ್ತವಾಗಿ ಕಾಣಿಸುತ್ತದೆ. ಪ್ರಸನ್ನಚಿತ್ತ ಎಂದರೆ ಸರ್ವ ಪ್ರಶ್ನಚಿತ್ತದಿಂದ ಭಿನ್ನವಾಗಿರುವುದು, ಯಾವುದೇ ಪ್ರಶ್ನೆಯಿರುವುದಿಲ್ಲ. ಪ್ರಸನ್ನವಾಗಿರುತ್ತಾರೆ. ಏಕೆ, ಏನು, ಹೇಗೆ ಇದೆಲ್ಲವೂ ಸಮಾಪ್ತಿಯಾಗಿರುತ್ತದೆ. ಹಾಗಾದರೆ ಈ ರೀತಿ ಪ್ರಸನ್ನಚಿತ್ತರು ಆಗಿದ್ದೀರಾ? ಅಥವಾ ಈಗಲೂ ಕೆಲಕೆಲವೊಮ್ಮೆ ಯಾವುದಾದರೂ ಇದೇಕೆ. ಇದು ಹೇಗಾಗುತ್ತದೆ. ಯಾವಾಗ ಆಗುತ್ತದೆ? ಹೀಗೆ ಪ್ರಶ್ನೆಗಳು ಉದ್ಭವಿಸುತ್ತದೆಯೇ, ಅದು ಮನಸ್ಸಿನಲ್ಲಾಗಲಿ ಅಥವಾ ಅನ್ಯರಿಂದಾದರೂ ಉತ್ಪನ್ನವಾಗುತ್ತದೆಯೇ? ಪ್ರಶ್ನಚಿತ್ತರೇ ಅಥವಾ ಪ್ರಸನ್ನಚಿತ್ತರಾಗಿದ್ದೀರಾ? ಅಥವಾ ಕೆಲವೊಮ್ಮೆ ಪ್ರಶ್ನಚಿತ್ತರು. ಕೆಲವೊಮ್ಮೆ ಪ್ರಸನ್ನಚಿತ್ತರಾಗಿದ್ದೀರಾ? ಹೇಗಿದ್ದೀರಿ? ಹಾಗೆ ನೋಡಿದರೆ ಬ್ರಾಹ್ಮಣರ ಖಜಾನೆಯಲ್ಲಿ ಅಪ್ರಾಪ್ತಿ ಎಂಬ ಯಾವುದೇ ವಸ್ತುವಿಲ್ಲ- ಇಂತಹ ಮಹಿಮೆಯಿದೆ. ಇದು ಯಾವ ಬ್ರಾಹ್ಮಣರ ಮಹಿಮೆಯಾಗಿದೆ?

ತಮ್ಮದೇ ಅಥವಾ ಬೇರೆ ಯಾರಾದರೂ ಬರುವವರದೇ? ತಾವೇ ಆಗಿದ್ದೀರಿ! ಹಾಗಾದರೆ ಯಾವುದಾದರೂ ಅಪ್ರಾಪ್ತಿಯಿದೆಯೇ? ಅಪ್ರಾಪ್ತಿಯು ಅಸಂತುಷ್ಟತೆಯ ಕಾರಣದಿಂದ ಆಗುತ್ತದೆ. ತಮ್ಮ ಅನುಭವದಲ್ಲಿಯೂ ನೋಡಿ- ಯಾವಾಗ ಮನಸ್ಸು ಅಸಂತುಷ್ಟವಾಗುವುದೋ ಅದರ ಕಾರಣವೇನು? ಯಾವುದಾದರೊಂದು ಅಪ್ರಾಪ್ತಿಯ ಅನುಭವ ಮಾಡಿದಾಗಲೇ ಅಸಂತುಷ್ಟತೆ ಆಗುವುದು. ಯಾವುದೇ ವಸ್ತುವಿನ ಅಪ್ರಾಪ್ತಿಯೇ ಇಲ್ಲ ಎಂಬ ಮಹಿಮೆಯು ಈಗಿನದಾಗಿದೆಯೇ ಅಥವಾ ವಿನಾಶದ ಸಮಯದ್ದಾಗಿದೆಯೇ? ವಿನಾಶದ ಸಮಯದಲ್ಲಿ ಸಂಪನ್ನರಾಗಿಬಿಡುವಿರಾ ಅಥವಾ ಈಗಲೇ ಆಗಬೇಕಾಗಿದೆಯೇ? ನಾವು ಸದಾ ಪ್ರಸನ್ನಚಿತ್ತರಾಗಿ ಇರುತ್ತೇವೆ. ಎಂದಿಗೂ ಯಾವುದೇ ಮಾತಿನಲ್ಲಿ ಅಥವಾ ತಮ್ಮ ಸಂಬಂಧದಲ್ಲಿ, ಅನ್ಯರ ಸಂಬಂಧದಲ್ಲಾದರೂ ಪ್ರಶ್ನೆಯು ಉತ್ಪನ್ನವಾಗುವುದಿಲ್ಲ, ಸದಾ ಸಂತುಷ್ಟವಾಗಿ ಇರುತ್ತೇವೆಂದು ಯಾರು ತಿಳಿಯುತ್ತೀರಿ, ಅಂತಹ ಸಂತುಷ್ಟವಾಗಿರುವ ಆತ್ಮರು ಎಷ್ಟಿರಬಹುದು? ಅನೇಕರಿದ್ದಾರೆ! ಒಳ್ಳೆಯದು- ಯಾರು ಸದಾ ಪ್ರಸನ್ನವಾಗಿರುತ್ತೇವೆ. ಭಲೆ ಮಾಯೆಯು ಎಷ್ಟೇ ಏರುಪೇರು ಮಾಡಲಿ ಆದರೆ ನಾವಂತು ಏರುಪೇರಾಗುವುದಿಲ್ಲ. ಮಾಯೆಯನ್ನೇ ಏರುಪೇರು ಮಾಡಿಬಿಡುತ್ತೇವೆ. ಮಾಯೆಯೇ ನಮಸ್ಕಾರ ಮಾಡುತ್ತದೆ. ನಾವು ಏರುಪೇರಾಗದೆ ಅಂಗದನ ಸಮಾನ ಇರುತ್ತೇವೆ ಮಾಯೆಯು ಸೋತುಹೋಗುತ್ತದೆ ಆದರೆ ನಾವು ವಿಜಯಿಗಳಾಗುತ್ತೇವೆ ಎಂದು ತಿಳಿಯುತ್ತೀರೋ  ಅಂತಹವರು ಕೈ ಮೇಲೆತ್ತಿರಿ. ಸದಾ ಎಂಬ ಶಬ್ಧವನ್ನು ನೆನಪಿಟ್ಟುಕೊಳ್ಳಬೇಕು. ಕೆಲವೊಮ್ಮೆಗೆ ಇರುವವರಲ್ಲ. ಬಹಳ ಸ್ವಲ್ಪವೇ ಮಂದಿಯಿದ್ದಾರೆ. ಕೋಟಿಯಲ್ಲಿ ಕೆಲವರು! ಪ್ರಶ್ನೆಯ ಉತ್ಪನ್ನವಂತು ಆಗುತ್ತದೆ ಅಲ್ಲವೆ. ಪ್ರಶ್ನಾರ್ಥಕ ಚಿಹ್ನೆಯನ್ನು ತಮ್ಮ ಶಬ್ದಕೋಶ(ಡಿಕ್ಷನ್ನರಿ)ದಿಂದ ತೆಗೆದುಬಿಡಿ, ಏರುಪೇರೂ ಸಹ ಆಗಬಾರದು. ಹೇಗಾದರೆ ಕಂಪ್ಯೂಟರ್ ನಲ್ಲಿ ಬಿಂದು ಬರುತ್ತದೆಯೋ ಹಾಗಾಯೇ ತಮ್ಮ ಬುದ್ದಿಯೆಂಬ ಕಂಪ್ಯೂಟರ್‌ನಲ್ಲಿ ಸದಾ ಬಿಂದುವಿನ ಚಿಹ್ನೆಯೇ ಬರಲಿ, ಪ್ರಶ್ನೆಯ ಅಥವ ಆಶ್ಚರ್ಯ ಸೂಚಕವು ಸಮಾಪ್ತಿಯಾಗಬೇಕು. ಇದನ್ನೇ ಸದಾ ಪ್ರಸನ್ನಚಿತ್ತ ಎಂದು ಹೇಳಲಾಗುತ್ತದೆ. ಹೀಗೆ ಪ್ರಸನ್ನಚಿತ್ತರು ಆಗಿರುವಂತಹವರು ಅನ್ಯರ ಪ್ರಶ್ನಾರ್ಥಕ ಚಿಹ್ನೆಯನ್ನೂ ಸಮಾಪ್ತಿ ಮಾಡಿಬಿಡುತ್ತಾರೆ. ಇಲ್ಲದಿದ್ದರೆ ತನ್ನಲ್ಲಿಯೇ ಪ್ರಶ್ನಾರ್ಥಕ ಚಿಹ್ನೆಯಿದ್ದರೆ ಯಾವುದೇ ಮಾತನ್ನು ಕೇಳಿದಾಗ, ನೋಡಿದಾಗ, ಹೇಳುವಾಗ ಹೌದು ಇದಂತು ಆಗಬಾರದು ಆದರೆ ಆಗಿಬಿಡುತ್ತದೆ. ನಾನೂ ಸಹ ಅರ್ಥ ಮಾಡಿಕೊಳ್ಳುತ್ತೇನೆ. ಆದರೆ ಆಗಿಬಿಡುತ್ತದೆ. ಹೀಗೆ ಪ್ರಶ್ನೆಗಳನ್ನು ಅವರು ಅಂಡರ್ ಲೈನ್ ಮಾಡುತ್ತಾರೆ. ಇನ್ನೂ ಒತ್ತಿ ಹೇಳುತ್ತಾರೆ ಇದು ಸರಿಯಲ್ಲ, ಇದು ಆಗಿ ಹೋಗಿದೆ, ಎಂದು ಅರ್ಥಾತ್ ಅವರನ್ನು ಪ್ರಸನ್ನರನ್ನಾಗಿ ಮಾಡದೇ ಇರುವುದಲ್ಲದೆ ಅವರಿಗೆ ಇನ್ನೂ ಪ್ರಶ್ನೆಗಳನ್ನು ಹೆಚ್ಚಿಸುತ್ತಾರೆ.  ಇನ್ನೂ ಹೆಚ್ಚಾಗಿ ಬಿಡುತ್ತದೆ. ನಿಜಕ್ಕೆ ಪ್ರಶ್ನೆ ಒಂದೇ ಆದರೆ ಒಂದರಿಂದ ಎರಡು, ಎರಡರಿಂದ ನಾಲ್ಕು ಆಗಿಬಿಡುತ್ತವೆ. ಹೀಗೆ ಪ್ರಸನ್ನವಾಗಿ ಇರುವ ತರಂಗಗಳಿಗೆ ಬದಲಾಗಿ ಪ್ರಶ್ನೆಗಳ ತರಂಗಗಳು ಬಹುಬೇಗ ವ್ಯಾಪಿಸುತ್ತವೆ. ಹೌದಾ, ಹಾಗೆಯೇ ಅರ್ಥಾತ್ ಅವರಿಗೆ ಇನ್ನೂ ಪ್ರೋತ್ಸಾಹ ಕೊಟ್ಟಂತೆ. ಹೌದಾ ಅರ್ಥಾತ್ ಆಶ್ಚರ್ಯ ಸೂಚಕ ಬಂದಿತಲ್ಲವೇ. ಬಿಂದು ಇಟ್ಟ ಹಾಗಲ್ಲ ತಾನೇ! ಹಾಗೆ ಸ್ವಯಂನ ಬಗ್ಗೆ ಕೂಡ ಅರ್ಥಾತ್ ಇದು  ನನ್ನಿಂದ ಆಗಬಾರದು, ಇದು ನನಗೆ ಲಭಿಸಬೇಕು, ಇದು ಇತರರಿಗೆ ಇರಬಾರದು, ಹೀಗೆ ಬೇಕು ಬೇಕು ಎಂಬುವುದು ಪ್ರಶ್ನಚಿತ್ತರನ್ನಾಗಿ ತಯಾರು ಮಾಡುತ್ತದೆ. ಪ್ರಸನ್ನಚಿತ್ತರನ್ನಾಗಿ ಅಲ್ಲ. ಅಂದಾಗ ಎಲ್ಲರ ಲಕ್ಷ್ಯವೇನಾಗಿದೆ? ಸಂತುಷ್ಟರಾಗಬೇಕು ಮತ್ತು  ಪ್ರಸನ್ನಚಿತ್ತರಾಗಬೇಕು.

ಯಾರು ಪ್ರಸನ್ನಚಿತ್ತರಾಗಿ ಇರುತ್ತಾರೆಯೋ ಅವರ ಮನಸ್ಸು-ಬುದ್ಧಿಯ ವ್ಯರ್ಥದ ಗತಿಯು ತೀವ್ರವಾಗಿರುವುದಿಲ್ಲ. ಸದಾ ನಿರ್ಮಲ, ನಿರಹಂಕಾರಿ ಆಗಿರುತ್ತಾರೆ. ನಿರಹಂಕಾರಿ ಆಗಿರುವ ಕಾರಣದಿಂದ ಎಲ್ಲರೂ ತನ್ನ ಪ್ರಸನ್ನಚಿತ್ತತೆಯ ನೆರಳಿನಲ್ಲಿ ಶೀತಲವಾಗಿಡುತ್ತಾರೆ. ಎಂತಹ ಅಗ್ನಿಯ ಸಮಾನ ಸುಡುತ್ತಿರುವ ಬಹಳ ಬಿಸಿಯಾಗಿರುವ ಬುದ್ಧಿಯಾಗಿರಬಹುದು ಆದರೆ ಪ್ರಸನ್ನಚಿತ್ತತೆಯ ತರಂಗಗಳ ನೆರಳಿನಲ್ಲಿ ಶೀತಲವಾಗಿಬಿಡುತ್ತಾರೆ. ಆಗ ಬಲಹೀನತೆ ಏನು ಬರುತ್ತದೆ ಹಾಗೆಯೇ ಸರಿಯಾಗಿ ನಡೆಯುತ್ತೀರಿ. ತಮ್ಮ ರೀತಿಯಿಂದ ಚೆನ್ನಾಗಿಯೇ ನಡೆಯುತ್ತೀರಿ. ಆದರೆ ಯಾವಾಗ ಸಂಬಂಧ-ಸಂಪರ್ಕದಲ್ಲಿ ಬರುತ್ತೀರೋ ಆಗ ಅನ್ಯರ ಬಲಹೀನತೆಗಳನ್ನು ನೋಡುತ್ತಾ-ಕೇಳುತ್ತಾ, ವರ್ಣನೆ ಮಾಡುತ್ತಾ ಪ್ರಭಾವದಲ್ಲಿ ಬಂದುಬಿಡುತ್ತದೆ. ನಂತರ ಹೇಳುವುದೇನು- ಇವರು ಮಾಡಿದರಲ್ಲವೆ ಆದ್ದರಿಂದ ನನ್ನಿಂದಲೂ ಆಯಿತು. ಇವರು ಹೇಳಿದರು ಆದ್ದರಿಂದ ನಾನೂ ಹೇಳಿದೆನು. ಅವರು 30 ಬಾರಿ ಹೇಳಿದರು. ನಾನು ಒಂದು ಸಾರಿ ಹೇಳಿದೆನು ನಂತರದಲ್ಲಿ ಬಾಬಾರವರ ಮುಂದೆಯೂ ಬಹಳ ಮಧುರಾತಿ ಮಧುರವಾದ ಮಾತನ್ನಾಡುತ್ತಾರೆ. ಹೇಳುತ್ತಾರೆ- ಬಾಬಾ, ತಾವೇ ತಿಳಿದುಕೊಳ್ಳಿರಿ. ಇಷ್ಟೊಂದು ಸಹನೆ ಎಲ್ಲಿಯವರೆಗೆ ಮಾಡುತ್ತಿರುವುದು! ಆದರೂ ಪುರುಷಾರ್ಥಿ ಅಲ್ಲವೆ ಆದ್ದರಿಂದ ಸ್ವಲ್ಪವಾದರೂ ಬಂದುಬಿಡುತ್ತದೆ ಅಲ್ಲವೆ! ಬಾಬಾರವರಿಗೆ ತಿಳಿಸುವುದರಲ್ಲಿ ತೊಡಗಿಬಿಡುತ್ತಾರೆ. ಇಲ್ಲ ಯಾರು ನಿಮಿತ್ತರಾಗಿ ಇರುತ್ತಾರೆಯೋ ಅವರಿಗೂ ಹೀಗಿತ್ತಲ್ಲವೆ, ಹೀಗಿತ್ತಲ್ಲವೆ, ಹೀಗಿತ್ತಲ್ಲವೆ. ಇಂತಿಂತಹ ಮಾಲೆಗಳನ್ನೇ ಜಪಿಸುತ್ತಾ ಬಹಳಷ್ಟು ಕಥೆಗಳನ್ನೇ ತಿಳಿಸುತ್ತಾರೆ. ಬಾಪ್‌ದಾದಾರವರು ಸದಾ ಇದೇ ಸೂಚನೆಯನ್ನು ಕೊಡುತ್ತಾರೆ- ಇಂತಹ ಮಾತುಗಳನ್ನು ಎರಡೇ ಅಕ್ಷರಗಳಲ್ಲಿಯೇ ವರ್ಣಿಸಿರಿ. ಬಹಳ ದೊಡ್ಡದಾಗಿ ಮಾಡಬಾರದು ಏಕೆಂದರೆ ಈ ವ್ಯರ್ಥ ಮಾತುಗಳು ಸಮಯ ವ್ಯರ್ಥ ಮಾಡುವಂತದ್ದಾಗಿರುತ್ತದೆ. ಮಜಾ ಇರುತ್ತದೆ ಹೇಗೆಂದರೆ ತಿನಿಸುಗಳಲ್ಲಿಯೂ ಉಪ್ಪಿನಕಾಯಿ ಇದ್ದರೆ ಪ್ರಿಯವೆನಿಸುವುದಲ್ಲವೆ, ಸಪ್ಪಗಿದ್ದರೆ ಇದನ್ನಂತು ತಿನ್ನುತ್ತಿರುತ್ತೇವೆಂದು ಹೇಳುತ್ತಾರೆ. ಹಾಗೆಯೇ ವ್ಯರ್ಥ ಮಾತು, ವ್ಯರ್ಥ ಚಿಂತನೆ ಕೇಳುವುದು, ಮಾತನಾಡುವುದು ಹಾಗೂ ಮಾಡುವುದರಲ್ಲಿ ಮುಂದೆ ಸಾಗುತ್ತಾ ಸಾಗುತ್ತಾ ಆಸಕ್ತಿ ಹೆಚ್ಚಾಗುವುದು. ನಂತರದಲ್ಲಿ ನಾನಂತು ಬಯಸುವುದೇ ಇಲ್ಲ ಆದರೆ ಅವರು ತಿಳಿಸಿದರಲ್ಲವೆ ಆದ್ದರಿಂದ ನಾನು ಹೇಳಿದೆನು- ಅದನ್ನೆಲ್ಲಾ ಕೇಳುತ್ತೇನೆ, ತಮ್ಮ ಮನಸ್ಸನ್ನು ಖಾಲಿ ಮಾಡಿಬಿಡಿ ಎಂದು, ಒಳ್ಳೆಯದು ಅವರಂತು ಖಾಲಿ ಮಾಡಿಬಿಟ್ಟರು ಮತ್ತು ತಾವು ತುಂಬಿಕೊಂಡಿದ್ದೀರಲ್ಲವೆ. ಆ ಸ್ವಲ್ಪ-ಸ್ವಲ್ಪವೆಂದು ತುಂಬಿಕೊಳ್ಳುತ್ತಾ ಅದು ಸಂಸ್ಕಾರವೇ ಆಗಿಬಿಡುತ್ತದೆ. ಮತ್ತೆ ಯಾವಾಗ ಸಂಸ್ಕಾರವಾಗುವುದೋ ಆಗ ಇದು ತಪ್ಪೆನ್ನುವುದೂ ಸಹ ಅನುಭವವಾಗುವುದಿಲ್ಲ. ಈ ವ್ಯರ್ಥ ಸಂಸ್ಕಾರವು ಬುದ್ಧಿಯ ನಿರ್ಣಯ ಶಕ್ತಿಯನ್ನೇ ಸಮಾಪ್ತಿ ಮಾಡಿಬಿಡುತ್ತದೆ ಆದ್ದರಿಂದ ಅತಿಸಹಜವಾಗಿ ಸದಾ ಸಂತುಷ್ಟವಾಗಿರುವ ವಿಧಿಯೇನೆಂದರೆ- ಸದಾ ತಮ್ಮ ಮುಂದೆ ಯಾವುದಾದರೊಂದು ವಿಶೇಷವಾದ ಪ್ರಾಪ್ತಿಯನ್ನು ಇಟ್ಟುಕೊಳ್ಳಿರಿ. ಏಕೆಂದರೆ ಪ್ರಾಪ್ತಿಯೆಂದಿಗೂ ಮರೆಯುವುದಿಲ್ಲ. ಜ್ಞಾನ ಬಿಂದುಗಳನ್ನು ಮರೆಯಬಹುದು ಆದರೆ ತಂದೆಯವರಿಂದ ಏನೇನು ಸಿಕ್ಕಿತು. ಎಷ್ಟು ಸಿಕ್ಕಿದೆ- ಈ ಪ್ರಾಪ್ತಿಯನ್ನೆಂದಿಗೂ ಮರೆಯುವುದಿಲ್ಲ. ವಿಭಿನ್ನವಾಗಿರುವುದು ಇಷ್ಟವಾಗುತ್ತದೆ ಅಲ್ಲವೆ. ಒಂದೇ ರೀತಿಯಾಗಿರುವುದು ಇಷ್ಟವಾಗುವುದಿಲ್ಲ ಅಂದಮೇಲೆ ತಾವು ತಮ್ಮ ಪ್ರಾಪ್ತಿಗಳನ್ನು ನೋಡಿ- ಜ್ಞಾನದ ಖಜಾನೆ ಎಷ್ಟು ಪ್ರಾಪ್ತಿಯಾಗಿದೆ. ಶಕ್ತಿಯ ಈ ಪ್ರಾಪ್ತಿಯೆಷ್ಟಾಗಿದೆ, ದಿವ್ಯಗುಣಗಳ ಪ್ರಾಪ್ತಿಯೆಷ್ಟಾಗಿದೆ. ಪ್ರತ್ಯಕ್ಷ ನಶೆ- ಖುಷಿಯಲ್ಲಿರುವ ಪ್ರಾಪ್ತಿಯೆಷ್ಟಾಗಿದೆ? ಬಹಳಷ್ಟು ಪಟ್ಟಿಯಿದೆಯಲ್ಲವೆ. ಮುಂಚೆಯೂ ತಿಳಿಸಿದ್ದೇವಲ್ಲವೆ- ಕೆಲವೊಮ್ಮೆ ಕೆಲವು. ಕೆಲವೊಮ್ಮೆ ಕೆಲವು ಗುಣಗಳ ಪ್ರಾಪ್ತಿಯನ್ನು

ಸನ್ಮುಖದಲ್ಲಿ ಇಟ್ಟುಕೊಳ್ಳುತ್ತಾ ಸಂತುಷ್ಟವಾಗಿರುವ ಗುಣವನ್ನೂ ತಮ್ಮದನ್ನಾಗಿ ಮಾಡಿಕೊಂಡರೆ, ಹೇಗಾದರೆ ವಿಕಾರಗಳಲ್ಲಿಯೂ ಪರಸ್ಪರದಲ್ಲಿ ಬಹಳ ಆಳವಾದ ಸಂಬಂಧವಿರುತ್ತದೆ. ಅದರಲ್ಲಿ ಹೊರಗಿನ ರೂಪದಲ್ಲಿ ಪ್ರತ್ಯಕ್ಷವಾಗಿ ಕ್ರೋಧವಿರುತ್ತದೆ ಆದರೆ ಒಳಗೆ ಪರಿಶೀಲನೆ ಮಾಡಿದರೆ ಕ್ರೋಧದ ಜೊತೆಗೆ ಲೋಭ, ಅಹಂಕಾರವು ಇದ್ದೇ ಇರುತ್ತದೆ. ಇವೆಲ್ಲವೂ ಪರಸ್ಪರದಲ್ಲಿ ಜೊತೆಗಾರರಾಗಿರುತ್ತವೆ. ಕೆಲವು ಪ್ರತ್ಯಕ್ಷ ರೂಪದಲ್ಲಿರುತ್ತವೆ. ಕೆಲವು ಗುಪ್ತ ರೂಪದಲ್ಲಿರುತ್ತವೆ ಹಾಗೆಯೇ ಗುಣಗಳಲ್ಲಿಯೂ ಏನಿವೆಯೋ ಅದರದೂ ಪರಸ್ಪರದಲ್ಲಿ ಸಂಬಂಧವಿದೆ. ಒಂದು ಗುಣವನ್ನು ಪ್ರತ್ಯಕ್ಷ ರೂಪದಲ್ಲಿ ಇಟ್ಟುಕೊಳ್ಳಿರಿ ಆದರೆ ಇನ್ನೊಂದು ಗುಣವೂ ಅದರೊಂದಿಗೇ ಗುಪ್ತ ರೂಪದಲ್ಲಿರುತ್ತದೆ. ಹಾಗಾದರೆ ಪ್ರತಿನಿತ್ಯವೂ ಅವಶ್ಯವಾಗಿ ಯಾವುದಾದರೊಂದು ಪ್ರಾಪ್ತಿ ಸ್ವರೂಪದ ಅನುಭವ ಮಾಡಿರಿ. ಒಂದುವೇಳೆ ಪ್ರಾಪ್ತಿಯು ಪ್ರತ್ಯಕ್ಷ ರೂಪದಲ್ಲಿದ್ದರೆ ಅದರ ಮುಂದೆ ಅಪ್ರಾಪ್ತಿಯು ಸಮಾಪ್ತಿಯಾಗಿಬಿಡುತ್ತದೆ ಮತ್ತು ಸಂತುಷ್ಟವಾಗಿ ಇರುತ್ತೀರಿ. ಅದೇರೀತಿಯಲ್ಲಿ ಪ್ರಪಂಚದಲ್ಲಿಯೂ ಎಲ್ಲರೂ ಮುಖ್ಯವಾದ ಯಾವ ಪ್ರಾಪ್ತಿಯನ್ನು ಬಯಸುತ್ತಾರೆ?

1. ಪ್ರತಿಯೊಬ್ಬರೂ ನಮ್ಮ ಹೆಸರು ಪ್ರಸಿದ್ಧವಾಗಲಿ, 2. ಮಾನ್ಯತೆ ಹಾಗೂ 3.ಗೌರವ (ನಾಮ್-ಮಾನ್-ಶಾನ್) ಬಯಸುತ್ತಾರಲ್ಲವೇ! ಆದರೆ ನೀವು ಏನನ್ನು ಬಯಸುತ್ತಿದ್ದೀರಿ. ನೀವು ಅಲ್ಪಕಾಲದ್ದಲ್ಲಿ ಬೇಹದ್ದಿನ ಪ್ರಾಪ್ತಿಯನ್ನು ಬಯಸುತ್ತಿದ್ದೀರಿ. ಹಾಗಾದರೆ ಪ್ರಪಂಚದವರಂತು ಅಲ್ಪಕಾಲದ ಪ್ರಸಿದ್ಧರಾಗುವುದರ ಹಿಂದೆ ಓಡುತ್ತಾರೆ. ತಮ್ಮ ಹೆಸರು ವಿಶ್ವದಲ್ಲೆಷ್ಟು ಶ್ರೇಷ್ಠವಾಗಿದೆಯೋ ಅಷ್ಟು ಮತ್ಯಾರದಾದರೂ ಇದೆಯೇ? ಹಾಗಾದರೆ ತಾವು ತಮ್ಮ ಹೆಸರನ್ನು ನೋಡಿಕೊಳ್ಳಿರಿ. ಎಲ್ಲರಿಗಿಂತಲೂ ಹೆಸರಿನ ವಿಶೇಷತೆಯೂ ಇದೇ ಆಗಿದೆ- ತಮ್ಮ ಹೆಸರನ್ನು ಯಾರು ಜಪಿಸುತ್ತಾರೆ? ಸ್ವಯಂ ಭಗವಂತನು ತಮ್ಮ ನಾಮ ಸ್ಮರಣೆ ಮಾಡುತ್ತಾರೆ ಹಾಗಾದರೆ ಇದಕ್ಕಿಂತ ಶ್ರೇಷ್ಠವಾದ ಹೆಸರಿನ್ನೇನಿದೆ. ತಮ್ಮ ಹೆಸರಿನಿಂದ ಈಗ ಅಂತಿಮ ಜನ್ಮದಲ್ಲಿಯೂ ಅನೇಕ ಆತ್ಮರು ಶರೀರ ನಿರ್ವಹಣೆ ನಡೆಸುತ್ತಿದ್ದಾರೆ. ತಾವು ಬ್ರಾಹ್ಮಣರಲ್ಲವೆ ಆದರೆ ಅವರು ಬ್ರಾಹ್ಮಣನ ಹೆಸರಿನಿಂದ ಎಷ್ಟೊಂದು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ! ಈಗಿನವರೆಗೂ ಹೆಸರಿನ ಬ್ರಾಹ್ಮಣರೂ ಸಹ ಬಹಳ ಶ್ರೇಷ್ಠರೆಂದು ಮಹಿಮೆ ಮಾಡುತ್ತಾರೆ! ಹಾಗಾದರೆ ತಮ್ಮ ಹೆಸರಿನ ಮಹಿಮೆಯೆಷ್ಟಿದೆ! ಇಷ್ಟು ಶ್ರೇಷ್ಠವಾದ ಹೆಸರು ತಮ್ಮದಾಗಿದೆ ಆದ್ದರಿಂದ ಅಲ್ಪಕಾಲದ ಹೆಸರಿನ ಹಿಂದೆ ಹೋಗಬಾರದು. ನನ್ನ ಹೆಸರನ್ನಂತು ಕೆಲವೊಮ್ಮೆಗಾದರೂ ತೆಗೆದುಕೊಳ್ಳುವುದಿಲ್ಲ. ನನ್ನ ಹೆಸರು ಯಾವಾಗಲೂ ಅಂತ್ಯದಲ್ಲಿಯೇ ಇರುತ್ತದೆ, ಸೇವೆಯನ್ನಂತು ನಾನು ಮಾಡುವೆನು, ಹೆಸರು ಅನ್ಯರದಾಗುತ್ತದೆ ಹೀಗೆ ಅಲ್ಪಕಾಲದ ಹೆಸರಿನ ಹಿಂದೆ ಹೋಗಬಾರದು. ತಂದೆಯ ಹೃದಯದಲ್ಲಿ ಸದಾ ತಮ್ಮ ಹೆಸರು ಶ್ರೇಷ್ಠವಾಗಿರುತ್ತದೆ. ತಂದೆಯ ಹೃದಯದಲ್ಲಿಯೇ ಹೆಸರಿದೆಯೆಂದಾಗ. ಯಾವುದೇ ಸೇವೆ, ಯಾವುದೇ ಕಾರ್ಯಕ್ರಮ ಅಥವಾ ಯಾವುದೇ ಮಾತುಗಳಲ್ಲಿ ಹೆಸರಿಲ್ಲದಿದ್ದರೂ ಪರವಾಗಿಲ್ಲ. ತಂದೆಯ ಬಳಿಯಂತು ಇದೆಯಲ್ಲವೆ! ಹೇಗೆ ಭಕ್ತಿಮಾರ್ಗದಲ್ಲಿ ಹನುಮಂತನ ಚಿತ್ರವನ್ನು ತೋರಿಸುವರಲ್ಲವೆ. ಅವನ ಹೃದಯದಲ್ಲಿ ಏನಿತ್ತು? ರಾಮನಿದ್ದನು. ಹಾಗೆಯೇ ತಂದೆಯ ಹೃದಯದಲ್ಲಿ ಯಾರಿದ್ದಾರೆ? (ಮಕ್ಕಳು) ಹಾಗಾದರೆ ಮಕ್ಕಳಲ್ಲಿ ತಾವಿದ್ದೀರಾ ಅಥವಾ ಇಲ್ಲವೋ? ಎಲ್ಲರ ಹೆಸರು ತಂದೆಯ ಹೃದಯದಲ್ಲಿದೆ ನೋಡಿದಿರಾ, ಪರಿಪಕ್ವವೇ? ಕೆಲವೊಮ್ಮೆ ಮಿಸ್ ಆಗಿಬಿಟ್ಟರೆ! ತಮ್ಮೆಲ್ಲರ ಹೆಸರಿದೆ ಅಂದಮೇಲೆ ಹೆಸರಿನ ಹಿಂದೆ ಏಕೆ ಹೋಗುತ್ತೀರಿ? ಏಕೆಂದರೆ ಮೆಜಾರಿಟಿಯಲ್ಲಿ ಇದೇ ಹೆಸರು-

ಮಾನ್ಯತೆ-ಗೌರವವೇ ಬೀಳುವಂತೆಯೂ ಮಾಡುತ್ತದೆ ಮತ್ತು ಇದೇ ನಲೆಯನ್ನೇರುವಂತೆ ಮಾಡುತ್ತದೆ ಆದ್ದರಿಂದ ಪ್ರಾಪ್ತಿಯ ರೂಪದಲ್ಲಿ ನೋಡಿರಿ, ಒಂದುವೇಳೆ ಯಾವುದೇ ಕಾರಣದಿಂದ ತಮ್ಮ ಹೆಸರು ಗುಪ್ತವಾಗಿದ್ದಾಗ ಮತ್ತು ತಾವು ನನ್ನ ಹೆಸರಿರಬೇಕು ಎಂದುಕೊಂಡರೆ ಇದು ಸರಿಯೇ ಆದರೂ ಯಾವುದೋ ಅತ್ಮನಿಂದ ಲೆಕ್ಕಾಚಾರದ ಕಾರಣದಿಂದ ಅಥವಾ ಅವರ ಸಂಸ್ಕಾರದ ಕಾರಣದಿಂದ ತಮ್ಮ ಹೆಸರಿರುವುದಿಲ್ಲ. ತಾವು ಸರಿಯಿದ್ದೀರಿ ಅವರು ತಪ್ಪಾಗಿದ್ದಾರೆ ಆದರೂ ಅವರ ಹೆಸರಿರುತ್ತದೆ. ತಮ್ಮದಿರುವುದಿಲ್ಲ ಎಂದರೆ ವಿಜಯಮಾಲೆಯಲ್ಲಿ ತಮ್ಮ ಹೆಸರಂತು ನಿಗಧಿಯಾಗಿದೆ ಆದ್ದರಿಂದ ಇದರ ಬಗ್ಗೆಯೂ ಚಿಂತಿಸಬಾರದು. ಈ ರೂಪದಲ್ಲಿಯೂ ಮಾಯೆಯು ಹೆಚ್ಚಾಗಿ ಬರುತ್ತದೆ ಅದ್ದರಿಂದ ಈಗ ಹೆಸರು ಮಿಸ್ ಆದರೂ ಪರವಾಗಿಲ್ಲ ಆದರೆ ವಿಜಯ ಮಾಲೆಯಲ್ಲಿ ತಮ್ಮ ಹೆಸರು ಮಿಸ್ ಆಗಲು ಸಾಧ್ಯವೇ ಇಲ್ಲ. ಮೊದಲು ತಮ್ಮ ಹೆಸರಿರುತ್ತದೆ ಆದ್ದರಿಂದ ತಮ್ಮ ಹೆಸರಿನ ಮಹಿಮೆಯನ್ನು ನೆನಪಿಟ್ಟುಕೊಳ್ಳಿರಿ- ವಿಜಯ ಮಾಲೆಯಲ್ಲಿದೆ, ಅಂತ್ಯದವರೆಗೂ ನನ್ನ ಹೆಸರು ಸೇವೆಯನ್ನು ಮಾಡುತ್ತಿದೆ, ಹೃದಯದಲ್ಲಿದೆ, ಎಂದು.

ತಮ್ಮ ಮಾನ್ಯತೆ ಎಷ್ಟಿದೆ? ಭಗವಂತನೂ ಸಹ ತನಗಿಂತಲೂ ತಮ್ಮನ್ನು ಮುಂದಿಟ್ಟರು. ಮೊದಲು ಮಕ್ಕಳು ಎಂದರು ಅಂದಮೇಲೆ ಸ್ವಯಂ ತಂದೆಯವರೇ ಮಾನ್ಯತೆ ಕೊಟ್ಟರು. ಎಷ್ಟೊಂದು ಮಾನ್ಯತೆಯದೆ ಅದರ ಪ್ರತ್ಯಕ್ಷ ಪ್ರಮಾಣವನ್ನೂ ನೋಡಿ- ತಮ್ಮ ಜಡಚಿತ್ರಗಳಲ್ಲಿಯೂ ಅಂತಿಮ ಜನ್ಮದವರೆಗೂ ಎಷ್ಟೊಂದು ಮಾನ್ಯತೆಯಿದೆ' ಭಲೆ ತಿಳಿದಿರಬಹುದು ಅಥವಾ ಇಲ್ಲದಿರಬಹುದು ಆದರೆ ಯಾವುದಾದರೂ ದೇವಿ-ದೇವತಾ ಚಿತ್ರವಿರುತ್ತದೆಯೆಂದರೆ ಎಷ್ಟೊಂದು ಮಾನ್ಯತೆ ಕೊಟ್ಟು ನೋಡುತ್ತಾರೆ. ಈಗಿನವರೆಗೂ ತಮ್ಮ ಚಿತ್ರಗಳಿಗೂ ಅತ್ಯಂತ ಶ್ರೇಷ್ಠವಾದ ಮಾನ್ಯತೆಯಿರುವುದೇ ಪ್ರತ್ಯಕ್ಷ ಪ್ರಮಾಣವಾಗಿದೆ. ಯಾವಾಗ ತಮ್ಮ ಚಿತ್ರಗಳೇ ಇಷ್ಟೊಂದು ಮಾನ್ಯತೆಯುಳ್ಳ, ಪೂಜ್ಯನೀಯವಾಗಿದೆ ಅಂದಮೇಲೆ ಯಾರ ಮಾನ್ಯತೆಯನ್ನು ಇಡಲಾಗುವುದು ಅವರನ್ನೆಷ್ಟು ಪೂಜ್ಯನೀಯರೆಂದು ಒಪ್ಪಿಕೊಳ್ಳುವರು! ಇವರು ನಮ್ಮ ಪೂಜ್ಯನೀಯರು, ಪೂಜ್ಯರಾಗಿದ್ದಾರೆ. ಎಂದೂ ಹೇಳುತ್ತಾರೆ. ಮಾನ್ಯತೆಯಿಲ್ಲದಿದ್ದರೆ ಹೇಗೆ ಚಿತ್ರಗಳು ಸಿಗುತ್ತಿದ್ದವು? ತಂದೆಯವರಂತು ಸದಾ ಮೊದಲು ಮಕ್ಕಳೆಂದೇ ಹೇಳುತ್ತಾರೆ. ಮಕ್ಕಳಿಗೆ ಡಬಲ್ ಪೂಜೆಯಾಗುತ್ತದೆ. ತಂದೆಯವರಿಗೆ ಒಂದೇ ರೂಪದಲ್ಲಿ ಅಂದಮೇಲೆ ತಮ್ಮ ಮಾನ್ಯತೆಯು ತಂದೆಯವರಿಗಿಂತಲೂ ಹೆಚ್ಚಾಗಿದೆಯಲ್ಲವೆ! ಇಷ್ಟು ಶ್ರೇಷ್ಠವಾದ ಮಾನ್ಯತೆ ಸಿಕ್ಕಿದೆ. *ಯಾವುದೇ ಅಲ್ಪಕಾಲದ ಮಾನ್ಯತೆಯ ಮಾತು ಬಂದಾಗ ಪರಮ ಆತ್ಮನ ಮಾನ್ಯತೆಯೇ ಸಿಕ್ಕ ಮೇಲೆ ಆತ್ಮರ ಮಾನ್ಯತೆ ಏನು ಮಾಡುತ್ತದೆ! ಎಂದು ಯೋಚಿಸಿ. ಆದರೆ ನಾವು ಇಷ್ಟೊಂದು ಮಾಡುತ್ತೇವೆ ಆದರೂ ಬೆಲೆಯಿಲ್ಲ, ಕೇಳುವುದೇ ಇಲ್ಲ. ಹೀಗೆ ಚಿಂತಿಸುವುದೂ ವ್ಯರ್ಥವಾಗಿದೆ. ತಾವೆಷ್ಟು ಅಲ್ಪಕಾಲದ ಮಾನ್ಯತೆಯ ಹಿಂದೆ ಓಡುತ್ತಿರೋ ಅಷ್ಟು ಈ ಹದ್ದಿನ ವಸ್ತುಗಳು ಯಾವುದಾದರೂ ಆಗಲಿ ನೆರಳಿನೊಂದಿಗೆ ಸಮಾನ ನೆರಳನ್ನು ನೋಡಿರುವಿರಲ್ಲವೇ! ನೆರಳಿನ ಹಿಂದೆ ಓಡಿದಾಗ ನೆರಳು ಸಿಗುತ್ತದೆಯೇ? ಇನ್ನೂ ಮುಂದಕ್ಕೆ ಹೋಗಿಬಿಡುತ್ತದೆ. ಹಾಗೆಯೇ ಈ ಹದ್ದಿನ ಗೌರವ ಹೆಸರು ಎಂಬುದು ನೆರಳಿನಂತೆ ಇವು ಮಾಯೆಯ ಬಿಸಿಲಿನಲ್ಲಿ ಮಾತ್ರ ಕಾಣಿಸುತ್ತವೆ ಆದರೆ ನಿಜಕ್ಕೆ ಅದು ಇರುವುದಿಲ್ಲ.* ನಿಮಗೆ ಹೆಸರು ಕೂಡ ಲಭಿಸಿದೆ ಮಾನ್ಯತೆ ಕೂಡ ಲಭಿಸಿದೆ ಮತ್ತು ಎಷ್ಟು ಗೌರವ ಲಭಿಸಿದೆ. ಒಂದೊಂದು ಗೌರವವನ್ನು ನೆನಪು ಮಾಡಿಕೊಳ್ಳಿ ಮತ್ತು ನಿಮ್ಮನ್ನು ಗೌರವದಲ್ಲಿ ಕುಳ್ಳರಿಸಿರುವುದು ಯಾರು? ತಂದೆ ಕುಳ್ಳಿರಿಸಿದ್ದಾರೆ ತಾನೆ! ತಂದೆಯ ಹೃದಯ ಸಿಂಹಾಸನ

ಅಧಿಕಾರಿಗಳು ಎಲ್ಲದಕ್ಕಿಂತಲೂ ಶ್ರೇಷ್ಠ ಗೌರವ ಯಾವುದು? ರಾಜ್ಯ ಪದವಿ ಇದೆಯಲ್ಲವೆ. ಅಂದಮೇಲೆ ತಮಗೆ ಸಿಂಹಾಸನ-ಕಿರೀಟ ಸಿಕ್ಕಿಬಿಡುತ್ತದೆಯಲ್ಲಿವೆ. ಯಾರು ಪರಮಾತ್ಮನ ಹೃದಯ ಸಿಂಹಾಸನಾಧಿಕಾರಿ ಆಗಿದ್ದೀರಿ ಇದಕ್ಕಿಂತಲೂ ದೊಡ್ಡ, ಗೌರವಯುತ ಸ್ಥಾನವೇನಿದೆ!

ಕೆಲವೊಮ್ಮೆ ನಿರ್ಣಯ ಮಾಡುವುದರಲ್ಲಿ ಒಂದು ಚಿಕ್ಕದಾದ ತಪ್ಪು ಮಾಡುತ್ತೀರಿ. ಸತ್ಯವಾದ ಗೌರವವೇನಿದೆ. ಆತ್ಮೀಕ ಗೌರವವೇನಿದೆಯೋ ಅದೆಂದಿಗೂ ಅಭಿಮಾನದ ಅನುಭೂತಿ ಮಾಡಿಸುವುದಿಲ್ಲ. ಹಾಗಾದರೆ ಕೆಲವೊಮ್ಮೆ ಏನು ಮಾಡುತ್ತೀರಿ? ಇರುವುದಂತು ಅಭಿಮಾನ ಆದರೆ ತಿಳಿಯುವುದೇನು- ಈ ಗೌರವಯುತ ಸ್ಥಾನವಂತೂ ನನ್ನದಾಗಿ ಇಟ್ಟುಕೊಳ್ಳಬೇಕು, ಇಷ್ಟಂತು ಇಟ್ಟುಕೊಳ್ಳಬೇಕಲ್ಲವೆ. ಹೀಗಿರುವುದು ಒಳ್ಳೆಯದಿರುತ್ತದೆ ಆದರೆ ಇದು ಗೌರವಯುಕ್ತ ಸ್ಥಾನವೇ ಅಥವಾ ಅಭಿಮಾನವೇ. ಇದನ್ನೂ ಬಹಳ ಚೆನ್ನಾಗಿ ಪರಿಶೀಲನೆ ಮಾಡಿಕೊಳ್ಳಿರಿ ಕೆಲವೊಮ್ಮೆ ಅಭಿಮಾನವನ್ನೂ ಗೌರವವೆಂದು ತಿಳಿಯುವಿರೇ ನಂತರ ನಿರಹಂಕಾರಿ ಆಗುವುದಿಲ್ಲ. ತಾವು ತಮ್ಮ ಗೌರವವನ್ನು ಸತ್ಯವೆಂದು ತಿಳಿಯುತ್ತೀರಿ ಆದರೆ ಅನ್ಯರು ಇದು ಅಭಿಮಾನವೆಂದು ಅಂದಮೇಲೆ ಸ್ವಲ್ಪವೇನಾದರೂ ಹೇಳಿದರೂ ತಮಗೆ ಅಪಮಾನವೆನಿಸುತ್ತದೆ. ಅಭಿಮಾನ ಇರುವವರಿಗೆ ಬಹಳಬೇಗನೆ ಅಪಮಾನದ ಫೀಲ್ ಆಗುತ್ತದೆ. ಸ್ವಲ್ಪ ತಮಾಷೆಯಾಗಿಯೂ ಏನಾದರೂ ಹೇಳಿದರೆ ಅಪಮಾನವೆನಿಸುತ್ತದೆ- ಇದು ಅಭಿಮಾನದ ಚಿಹ್ನೆಯಾಗಿದೆ. ನಾನಂತು ಹೀಗಿಲ್ಲ. ಅವರೇಕೆ ಹೇಳಬೇಕು ಎಂದು ಚಿಂತಿಸುತ್ತೀರಿ. ಈ ನಿರ್ಣಯವನ್ನು ಸರಿಪಡಿಸಿಕೊಳ್ಳಿರಿ. ಆ ಸಮಯದ ನಿರ್ಣಯದಲ್ಲಿ ಕೊರತೆ ಮಾಡಿಬಿಡುತ್ತೀರಿ. ಯಥಾರ್ಥಕ್ಕೆ ಬದಲಾಗಿ ಮಿಕ್ಸ್ ಆಗಿಬಿಡುತ್ತದೆ ಮತ್ತು ತಾವು ಅದನ್ನೇ ಯಥಾರ್ಥವೆಂದು ತಿಳಿಯುತ್ತೀರಿ. ಹೇಳುವುದರಲ್ಲಿ ಇವರಂತು ಬಹಳ ಒಳ್ಳೆಯವರೆಂದು ಹೇಳುತ್ತಾರೆ ಆದರೆ ಮಾತುಕತೆ, ಎಳುವುದು, ಕುಳಿತುಕೊಳ್ಳುವುದೇನೆಲ್ಲಾ ಇದೆಯೋ ಅದರಲ್ಲಿ ಅಭಿಮಾನವೆನಿಸುತ್ತದೆ- ಇದನ್ನೂ ಯಾರು ಹೇಳಿದರೂ ಅಪಮಾನದ ಫೀಲಿಂಗ್ ಬಂದುಬಿಡುತ್ತದೆ. ಹಾಗಾದರೆ ಸ್ವಮಾನ ಹಾಗೂ ಅಭಿಮಾನದ ಅಂತರವನ್ನೂ ಪರಿಶೀಲನೆ ಮಾಡಿಕೊಳ್ಳಿರಿ. ಸ್ವಮಾನವಂತು ಎಷ್ಟೊಂದು ಶ್ರೇಷ್ಠವಾಗಿದೆ. ಗೌರವವೂ ಸಹ ಎಷ್ಟೊಂದು ಶ್ರೇಷ್ಠವಾಗಿರುವುದೇ ಇದೆ. ಆ ಬೇಹದ್ದಿನ ಹೆಸರು, ಮಾನ್ಯತೆ ಹಾಗೂ ಗೌರವವನ್ನು ಸದಾ ಪ್ರತ್ಯಕ್ಷ ರೂಪದಲ್ಲಿ ಇಟ್ಟುಕೊಳ್ಳಿರಿ, ಗುಪ್ತವಾಗಿ ಇಡಬಾರದು. ಹೇಗೆ ನೆನಪಿನ ವಿಷಯದಲ್ಲಿ ಕೆಲಕೆಲವೊಮ್ಮೆ ಹುಡುಗಾಟಿಕೆ ಬಂದುಬಿಡುತ್ತದೆಯೋ ಆಗ ಹೇಳುತ್ತಾರೆ- ನಾವಂತು ತಂದೆಯ ಮಕ್ಕಳಾಗಿದ್ದೇವೆ. ನೆನಪೇನು ಮಾಡುವುದು.... ಆದರೆ ಪ್ರತ್ಯಕ್ಷವಾಗಿ ಸಂಕಲ್ಪದಿಂದ ಪ್ರಾಪ್ತಿಯ ಅನುಭವವಾಗುತ್ತದೆ. ಅದೇರೀತಿ ಪ್ರತಿಯೊಂದು ಧಾರಣೆಯಲ್ಲಿಯೂ ಅಲರ್ಟ್ ಆಗಿರಿ, ಹುಡುಗಾಟಿಕೆಯಲ್ಲಿ ಇರಬಾರದು ಏಕೆಂದರೆ ಸಮಯವು ಸಮೀಪಿಸುತ್ತಿದೆ ಹಾಗೂ ಸಮಯದ ಸಮೀಪತೆಯ ಸೂಚನೆಯನ್ನೇನು ಕೊಡುತ್ತಿದೆ? ಸಮಾನರಾಗಿರಿ, ಸಂಪನ್ನರಾಗಿರಿ. ಸಮಯದ ಪ್ರತಿಜ್ಞೆಯನ್ನು ನೋಡಿರಿ. ನಿಮಗೆ ಯಾವ ಅಪ್ರಾಪ್ತಿಯೂ ಇಲ್ಲ ಮತ್ತು ಯಾವ ಪ್ರಾಪ್ತಿ ಲಭಿಸುತ್ತಿದೆ? ಸ್ಥೂಲವಾಗಿ ನೋಡಿದರೆ ಆರೋಗ್ಯ ಬೇಕು, ಧನ ಬೇಕು, ಸಂಬಂಧಿಕರು ಬೇಕು ಎನ್ನುತ್ತಾರೆ. ಪ್ರಾಪ್ತಿಯಲ್ಲಿ ಇದೇ ಬಯಸುತ್ತಾರಲ್ಲವೇ? ಆದರೆ ನಿಮ್ಮ ಆತ್ಮ ಎಷ್ಟು ಆರೋಗ್ಯಕರವಾದುದು. ಆತ್ಮನ ರಕ್ತ ಪ್ರಸರಣೆ ಹೆಚ್ಚುಕಡಿಮೆ ಆಗುತ್ತದೆಯೇ? ಒಮ್ಮೊಮ್ಮೆ ಇರುತ್ತದೆಯೇ? ಇರುವುದಿಲ್ಲ ತಾನೆ. ಸದಾ ಆರೋಗ್ಯವಾಗಿ ಇದ್ದೀರಲ್ಲವೇ. ಏಕೆಂದರೆ ಅಮೃತ ವೇಳೆ ಪ್ರತಿ ದಿನವೂ ತಂದೆ "ಸದಾ ಆರೋಗ್ಯಭವ!" ಎಂಬ

ವರದಾನ ಕೊಡುತ್ತಿದ್ದಾರೆ. ಶರೀರಕ್ಕೆ ಕರ್ಮಗಳ ಖಾತೆ ಇರಬಹುದು ಆದರೆ ಆತ್ಮ ಸದಾ ಆರೋಗ್ಯವಾಗಿ ಇದೆಯಲ್ಲವೇ! ಆತ್ಮನಿಗೆ ಯಾವ ರೋಗವು ಇಲ್ಲ ತಾನೇ. ಆತ್ಮ ಆರೋಗ್ಯವಾಗಿ ಇದೆ ಅಲ್ಲವೇ! ಇಲ್ಲವೇ? ಆಗಾಗ ಅನಾರೋಗ್ಯ ಬರುತ್ತದೆಯೇ?

ಡಬಲ್ ವಿದೇಶಿಯರಿಗೆ ಅನಾರೋಗ್ಯ ಬರುತ್ತದೆಯೇ? ಸ್ವಲ್ಪ ಸ್ವಲ್ಪ ವಿಶ್ರಾಂತಿ ಪಡೆಯುತ್ತಿದ್ದೀರಾ? ಡಬಲ್ ವಿದೇಶಿಯರು ಅರ್ಥಾತ್ ಡಬಲ್ ಆರೋಗ್ಯವಂತರು. ಇಂತಹ ಡಬಲ್ ಆರೋಗ್ಯವಂತರನ್ನು ನೋಡಿ ರೋಗದಿಂದ ಇರುವವರು ಕೂಡ ಆರೋಗ್ಯವಂತರಾಗಿ ಬಿಡುತ್ತಾರೆ. ಆರೋಗ್ಯದ ಪ್ರಾಪ್ತಿ ನಿಮಗೆ ಎಷ್ಟು ಲಭಿಸಿದೆ ಮತ್ತು ಸಂಬಂಧದಲ್ಲಿ ಕೂಡ ನೋಡಿ ಪ್ರಪಂಚದಲ್ಲಿ ಇರುವವರಿಗಾದರೆ ಸ್ವಲ್ಪ ಸಂಬಂಧಗಳು ಇರುತ್ತವೆ ಸ್ವಲ್ಪ ಇರುವುದಿಲ್ಲ ಆಗಾಗ ಸಮಾಪ್ತಿ ಕೂಡ ಆಗಿಬಿಡುತ್ತದೆ ಆದರೆ ನಿಮಗೆ ಸರ್ವ ಸಂಬಂಧಗಳು ಒಂದೇ ತಂದೆಯೊಂದಿಗೆ ಇವೆ. ಯಾವ ಸಂಬಂಧವಾದರೂ ಲೋಪವಾಗಿ ಇದೆಯೇ? ಕೇವಲ ಬಾಬಾರವರು ತಂದೆಯೇ ಆಗಲಿ ಸ್ನೇಹಿತನಲ್ಲ ಎಂದುಕೊಳ್ಳುತ್ತಿಲ್ಲ ತಾನೇ? ಸರ್ವ ಸಂಬಂಧಗಳು ತಂದೆಯೊಂದಿಗೆ ಇವೆ ತಂದೆಯನ್ನು ಯಾವ ಸಂಬಂಧದಿಂದ ಸ್ಮೃತಿ ಮಾಡಿದರೂ ಸದಾ ಆ ಸಂಬಂಧಗಳನ್ನು ನಿಭಾಯಿಸಲು ತಂದೆ ಹಾಜರಾಗಿ ಇರುತ್ತಾರೆ. ತಂದೆಗೆ ಆಲಸ್ಯವಾಗುತ್ತದೆಯೇ? ಒಂದೇ ಸಮಯದಲ್ಲಿ ಎಲ್ಲರೊಂದಿಗೆ ಸಂಬಂಧವನ್ನು ನಿಭಾಯಿಸಬಲ್ಲರು. ನಾನು ಸ್ನೇಹಿತನ ಸಂಬಂಧವನ್ನು ಬೇಕೆಂದು ಕೊಂಡಿದ್ದೇನೆ ಆದರೆ ತಂದೆ ಇನ್ನೊಂದು ಸಂಬಂಧದಲ್ಲಿ ಬಿಜಿಯಾಗಿ ಇದ್ದಾರೆ ಎಂದು ತಿಳಿಯುತ್ತಿಲ್ಲ ತಾನೇ? ಕ್ಷಣದಲ್ಲಿ ಯಾವ ಸಂಬಂಧದಿಂದ ನೆನಪು ಮಾಡಿದರೂ ಆ ಸಂಬಂಧ ದಿಂದ ಬಾಬಾ ಬಾಲಕ್ ಸೋ ಮಾಲಿಕ್ ಮಕ್ಕಳು ಹಾಗೆಯೇ ಎಂದು ಹಾಜರಾಗಿ ಬಿಡುತ್ತಾರೆ. ಯಜಮಾನ ಕರೆದಾಗ ಬರದೇ ಇರುವುದಂತೂ ಹೇಗೆ ಆಗುತ್ತದೆ. ಹಾಗೆಯೇ ಸಂಬಂಧಗಳಲ್ಲಿ ಕೂಡ ನೋಡಿ ಸರ್ವ ಸಂಬಂಧಗಳು ಲಭಿಸಿವೆಯೇ, ಈ ಅನುಭವ ಇದೆಯಾ ಅಥವಾ ಕೇವಲ ಕೇಳಿದ್ದೀರಾ ಹಾಗಂತೂ ಇಲ್ಲ ತಾನೇ? ಹೌದೋ, ಇಲ್ಲವೋ? ಹಿಂದೆ ಇರುವವರು ಕೂಡ ಹೌದು ಎನ್ನುತ್ತಿದ್ದೀರಾ ಅಥವಾ ಇಲ್ಲವೋ? ಹಿಂದಿನವರು ಮುಂದೆ ಕುಳಿತುಕೊಳ್ಳುವುದನ್ನು ತ್ಯಾಗ ಮಾಡಿದ್ದಾರೆ ಅಲ್ಲವೇ ಆದ್ದರಿಂದ ಬಾಪ್‌ದಾದಾ ಕೂಡ ಮಾತು ಮಾತಿಗೆ ಹಿಂದಕ್ಕೆ ನೋಡುತ್ತಿದ್ದಾರೆ.

ಯಾವಾಗಲಾದರೂ ನಿಮ್ಮ ಸ್ಥಿತಿಯನ್ನು ಅನುಸರಿಸಿ ಬಿಂದು ನೆನಪಿಗೆ ಬರಲಿಲ್ಲ ಎಂದಿಟ್ಟುಕೊಳ್ಳಿ, ಬಿಂದು ಸೂಕ್ಷ್ಮ ತಾನೇ ನಿಮ್ಮ ಸ್ಥಿತಿ ಬಲಹೀನವಾಗಿದೆ, ಸ್ಥೂಲದಲ್ಲಿ ಇರುವಾಗ ಸೂಕ್ಷ್ಮ ಬಿಂದುವನ್ನು ನೆನಪು ಮಾಡಿದರೂ ನೆನಪಿಗೆ ಬರುವುದಿಲ್ಲ. ಅಂತಹ ಸಮಯದಲ್ಲಿ ಬಿಂದುವಾಗಬೇಕು, ಬಿಂದು ಬರಬೇಕು, ಬರಬೇಕು, ಎಂಬ ಯುದ್ಧವನ್ನು ಮಾಡಬೇಡಿ. ಆ ಸಮಯದಲ್ಲಿ ಪ್ರಾಪ್ತಿಗಳನ್ನು ನೆನಪಿಗೆ ತಂದುಕೊಳ್ಳಿರಿ. ಸಂಬಂಧಗಳನ್ನು ನೆನಪು ಮಾಡಿರಿ, ಸಾಕಾರ ಮಿಲನವನ್ನು ನೆನಪಿಸಿಕೊಳ್ಳಿರಿ, ನಿಮ್ಮ ವಿಧವಿಧವಾದ ವಿಚಿತ್ರ ಅನುಭವಗಳನ್ನು ನೆನಪಿಸಿಕೊಳ್ಳಿರಿ. ಇದಂತೂ ಸಹಜವೇ ತಾನೇ! ಯಾರಿಗಾದರೂ ಉಪನ್ಯಾಸ ಹೇಳಲು ಬರದಿದ್ದರೆ ಅವರು ನಾನು ಉಪನ್ಯಾಸ ಹೇಳುವ ರೀತಿ ತಯಾರಾಗಲಿಲ್ಲ ಎಂದು ತಿಳಿಯುತ್ತಾರೆ. ಆದರೆ ಎಲ್ಲದಕ್ಕಿಂತಲೂ ಒಳ್ಳೆಯ ಉಪನ್ಯಾಸ ಅನುಭವವನ್ನು ತಿಳಿಸುವುದು ಇದು ಎಲ್ಲರಿಗೆ ಬರುತ್ತದೆ ತಾನೇ? ಇದಕ್ಕಾಗಿ ಏನಾದರೂ ಈ ವಿಷಯವನ್ನು ಹೇಳಬೇಕು, ಈ ವಿಷಯವನ್ನು ಹೇಳಬಾರದು ಎಂದು

ತಯಾರಾಗಬೇಕಾ? ಅನುಭವದ ರೂಪದಲ್ಲಿ ಹೇಳಿರಿ ಆಗ ನಂಬರ್‌ವನ್ನಾಗಿ ಬಿಡುತ್ತೀರಿ. ನೀವು ಮಾಡಿಕೊಂಡಿರುವ ವಿಧ ವಿಧವಾದ ಅನುಭವಗಳನ್ನು ಹಂಚುತ್ತಾ ಹೋದರೆ ಅವು ಬೆಳೆಯುತ್ತಾ ಇರುತ್ತವೆ. ಉಪನ್ಯಾಸ ಹೇಳುವುದಂತೂ ಎಲ್ಲರಿಗೂ ಬರುತ್ತದೆ. ಐದು ವರ್ಷದ ಮಗುವಿಗೆ ಕೂಡ ಬರುತ್ತದೆ ಆದ್ದರಿಂದ ಯುದ್ಧದಲ್ಲಿ ಸಮಯವನ್ನು ಕಳೆಯಬೇಡಿರಿ. ಇದೇ ಇರಬೇಕು ಎಂದು ಕೊಳ್ಳಬಾರದು. ಯಾವುದೋ ಒಂದು ವಿಧಿಯಿಂದ ವ್ಯರ್ಥವನ್ನು ಸಮಾಪ್ತಿ ಮಾಡಿರಿ ಮತ್ತು ಸಮರ್ಥತೆಯನ್ನು ಪ್ರತ್ಯಕ್ಷದಲ್ಲಿ ತನ್ನಿರಿ. ಯುದ್ಧ ಮಾಡುತ್ತಾ ಮಾಡುತ್ತಾ ಏನಾಗುತ್ತದೆ ಬಲಹೀನತೆ ಎಂಬುದು ಸಂಸ್ಕಾರವಾಗಿ ಬಿಡುತ್ತದೆ. ನಂತರ ನನಗೆ ಇದಾಗುತ್ತಿಲ್ಲ, ತಂದೆ ವಿಕರ್ಮವನ್ನು ವಿನಾಶ ಮಾಡಿರಿ ಎನ್ನುತ್ತಿದ್ದಾರೆ ಆದರೆ ಹೀಗಾಗುತ್ತಿಲ್ಲ ಎಂದು ಹೇಳುತ್ತೀರಿ. ವಿಕರ್ಮಗಳು ವಿನಾಶವಾಗದಿದ್ದರೆ ಸುಕರ್ಮಗಳ ಖಾತೆಯನ್ನು ತಯಾರು ಮಾಡಿಕೊಳ್ಳಿರಿ, ಅಷ್ಟೇ ಆಗಲಿ ಸಮಯವನ್ನು ಕಳೆಯಬೇಡಿರಿ. ಎಷ್ಟೆಷ್ಟು ಶ್ರೇಷ್ಠ ಕರ್ಮಗಳ ಖಾತೆ ಬೆಳೆಯುತ್ತಾ ಇರುತ್ತದೆಯೋ ಅಷ್ಟಷ್ಟು ವಿಕರ್ಮಗಳ ಖಾತೆ ಸಮಾಪ್ತಿಯಾಗುತ್ತದೆ. ಆದ್ದರಿಂದ ಸಮಯವನ್ನು ಕಳೆಯಬೇಡಿರಿ ಎಲ್ಲದಕ್ಕಿಂತಲೂ ಅಮೂಲ್ಯವಾದದು ಸಮಯ ಏಕೆಂದರೆ ಈ ಸಮಯಕ್ಕಾಗಿಯೇ ಮಹಿಮೆ ಇದೆ ಈಗ ಇಲ್ಲದಿದ್ದರೆ ಇನ್ನೆಂದಿಗೂ ಇಲ್ಲ ಎಂದು. ಒಂದೊಂದು ಕ್ಷಣವೂ ಕೂಡ ಈಗ ಇಲ್ಲದಿದ್ದರೆ ಇನ್ನೆಂದಿಗೂ ಇಲ್ಲ. ಆದ್ದರಿಂದ ಸಮಯವನ್ನು ಕಳೆಯಬೇಡಿರಿ ನಡೆಯುತ್ತಾ ನಡೆಯುತ್ತಾ ಎರಡು ವಿಷಯಗಳನ್ನು ಕೇಳಿದೆನು, ಎರಡು ವಿಷಯಗಳನ್ನು ಮಾಡಿದೆನು, ಎನ್ನುತ್ತಿದ್ದಾರೆ ಅರ್ಥಾತ್ ಇದಕ್ಕೆ ಕೂಡ ಸಮಯ ವ್ಯರ್ಥವಾಗಿ ಬಿಡುತ್ತಿದೆ. ಎಷ್ಟು ಸಮಯವನ್ನು ಕಳೆಯುತ್ತಿರೋ ಅಷ್ಟು ವ್ಯರ್ಥ ಸಂಸ್ಕಾರ ಪಕ್ಕಾ ಆಗಿಬಿಡುತ್ತದೆ. ಯಾವುದಾದರೂ ದೊಡ್ಡ ದೊಡ್ಡ ವಿಷಯವಿದ್ದರೆ ಅದನ್ನು ಚಿಕ್ಕದಾಗಿ ಮಾಡಿರಿ, ಇಷ್ಟಕ್ಕೆ ಮುಂಚೆ ಕೂಡ ತಿಳಿಸಿದ್ದೇನೆ. ವ್ಯರ್ಥ ವಿಷಯಗಳ ವರ್ಣನೆ ಬಹಳ ದೊಡ್ಡದಾಗಿ ಇರುತ್ತಿದೆ. ವ್ಯರ್ಥದಿಂದ ರಕ್ಷಿಸಿಕೊಳ್ಳಿರಿ. ನಾನು ಏನು ಮಾಡಲಿಲ್ಲ, ಕೇಳಲಿಲ್ಲ, ಮಾತನಾಡಲಿಲ್ಲ ಆದರೆ ಅವರು ನಡೆಯುತ್ತಾ ನಡೆಯುತ್ತಾ ಎರಡು ಮಾತುಗಳನ್ನು ಹೇಳಿದರು, ಎರಡು ಮಾತು ನಾನು ಅವರಿಗೆ ಹೇಳಿದೆನು ಎನ್ನುತ್ತಿದ್ದೀರಿ. ಆದರೆ ವ್ಯರ್ಥದ ಖಾತೆ ಜಮಾ ಆಗಿಬಿಡುತ್ತದೆ. ಕೇಳುವುದರಿಂದ ಕೂಡ ವ್ಯರ್ಥ ಜಮಾ ಆಗಿಬಿಡುತ್ತದೆ. ಒಂದು ವೇಳೆ ಯಾರಾದರೂ ನಿಮಗೆ ಹೇಳಲು ಬಂದರೆ ಅದನ್ನು ಕೂಡ ಕಡಿಮೆ ಮಾಡಿರಿ. ಅವರಿಗೆ ಕೂಡ ತಿಳಿ ಹೇಳಿರಿ ಇದೇ ಶುದ್ಧ ಸೇವೆ ಮತ್ತು ದಯೆ ತೋರಿಸುವುದು. ದಯ ಹೃದಯಗಳೇ ತಾನೇ?

**ನಾಲ್ಕು ಕಡೆ ಇರುವ ಸದಾ ಸರ್ವಪ್ರಾಪ್ತಿ ಸ್ವರೂಪ ಆತ್ಮರಿಗೆ, ಸದಾ ಸಂತುಷ್ಟವಾಗಿ ಸದಾ ಪ್ರಸನ್ನ ಚಿತ್ತರಾಗಿ ಇರುವ ಶ್ರೇಷ್ಠಾತ್ಮರಿಗೆ, ಸದಾ ಸ್ವಯಂ ಅನ್ನು ಶ್ರೇಷ್ಠ ಹೆಸರು, ಮಾನ್ಯತೆ, ಗೌರವಕ್ಕೆ ಅಧಿಕಾರಿಯಾಗಿ ಅನುಭವ ಮಾಡಿಕೊಳ್ಳುವ ಸಮೀಪ ಆತ್ಮರಿಗೆ, ಸದಾ ಸರ್ವರಿಗೆ ಸಂತುಷ್ಟತೆಯ ತರಂಗಗಳ ಪ್ರಕಾಶವನ್ನು, ಶಕ್ತಿಯನ್ನು ಕೊಡುವ ಪ್ರಸನ್ನ ಚಿತ್ತ ಆತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 16-03-1995.

***ಸರ್ವಪ್ರಾಪ್ತಿ ಸಂಪನ್ನ ಆತ್ಮನ ಚಿಹ್ನೆ ಸಂತುಷ್ಟತೆ ಹಾಗೂ ಪ್ರಸನ್ನತೆ.***

ಪ್ರಾಪ್ತಿಗಳ ಚಿಹ್ನೆಯು ಸಂತುಷ್ಟವಾಗಿರುವುದಾಗಿದೆ. ಸರ್ವಪ್ರಾಪ್ತಿಗಳಿಂದ ಸಂಪನ್ನವಾಗಿರುವವರು ಸದಾ ಸಂತುಷ್ಟ ಮಣಿಯಾಗಿದ್ದು ಎಲ್ಲರಿಗೂ ಸಂತುಷ್ಟತೆಯ ತರಂಗಗಳನ್ನು ಹರಡಿಸುತ್ತಾ ಇರುತ್ತಾರೆ. ಅವರ ಚೆಹರೆಯು ಸದಾ ಪ್ರಸನ್ನ ಚಿತ್ತವಾಗಿ ಕಾಣಿಸುತ್ತದೆ. ಪ್ರಸನ್ನ ಚಿತ್ತ ಎಂದರೆ ಸರ್ವ ಪ್ರಶ್ನೆಗಳಿಂದ ಅತೀತವಾಗಿರುವುದು. ಯಾವುದೇ ಪ್ರಶ್ನೆ ಇರುವುದಿಲ್ಲ. ಪ್ರಸನ್ನವಾಗಿರುತ್ತಾರೆ ಏಕೆ, ಏನು, ಹೇಗೆ ಇವೆಲ್ಲವೂ ಸಮಾಪ್ತಿಯಾಗಿ ಬಿಡುತ್ತದೆ. ಹೀಗೆ ಪ್ರಸನ್ನವಾಗಿದ್ದೀರಾ? ಹೇಗಾದರೆ ವಿಕಾರಗಳಿಗೆ ಪರಸ್ಪರ ಸಂಬಂಧವಿರುತ್ತದೆಯೋ ಹಾಗೆಯೇ ಗುಣಗಳಿಗೆ ಕೂಡ ಪರಸ್ಪರ ಸಂಬಂಧವಿರುತ್ತದೆ. ಒಂದು ಗುಣವನ್ನು ಪ್ರತ್ಯಕ್ಷ ರೂಪದಲ್ಲಿ ಇಟ್ಟುಕೊಳ್ಳಿರಿ. ಅದರ ಜೊತೆ ಇನ್ನೊಂದು ಗುಣವೂ ಕೂಡ ಗುಪ್ತ ರೂಪದಲ್ಲಿರುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮ ಕೊಟ್ಟಿರುವ ಸರ್ವಪ್ರಾಪ್ತಿಗಳ ವಾರಸತ್ವಕ್ಕೆ ಸಂಪೂರ್ಣ ಅಧಿಕಾರಿ.

2. ನಾನು ಸಂತುಷ್ಟ ಮಣಿಯಾಗಿ ಇತರರಿಗೆ ಕೂಡ ಸಂತುಷ್ಟತೆಯ ಹೊಳಪಿನ ತರಂಗಗಳನ್ನು ವ್ಯಾಪಿಸುತ್ತಾ ಸರ್ವಪ್ರಾಪ್ತಿಗಳ ನಶೆಯಲ್ಲಿ ಇದ್ದೇನೆ.

3. ನಾನು ಪ್ರಶ್ನೆ, ಆಶ್ಚರ್ಯ ಸೂಚಕವನ್ನು ಸಮಾಪ್ತಿ ಮಾಡಿ ಸದಾ ಬಿಂದು ಇಟ್ಟಿರುವ ಮುಖದಿಂದ ಪ್ರಸನ್ನವಾಗಿರುವ ಪ್ರಸನ್ನ ಚಿತ್ತ ಸ್ವರೂಪ.

4. "ಬ್ರಾಹ್ಮಣರ ಖಜಾನೆಯಲ್ಲಿ ಅಪ್ರಾಪ್ತಿ ಎಂಬ ಯಾವುದೇ ವಸ್ತು  ಇಲ್ಲ" ಆದ್ದರಿಂದ ಬ್ರಾಹ್ಮಣಾತ್ಮನಾದ ನಾನು ಸದಾ ಸಂತುಷ್ಟವಾಗಿರುವ ಸರ್ವಪ್ರಾಪ್ತಿ ಸಂಪನ್ನ ಸ್ವರೂಪ.

5. ನಾನು ಸದಾ ನಿರ್ಮಲವಾಗಿ, ನಿರಹಂಕಾರಿಯಾಗಿರುವ ಪ್ರಸನ್ನ ಚಿತ್ತ ಸ್ವರೂಪ.

6. ನಾನು ಎಂತಹ ಅಗ್ನಿಯ ಸಮಾನವಾಗಿ, ಸುಟ್ಟು ಹೋಗುವ ಅಥವಾ ಬಹಳ ಬಿಸಿ ಇರುವ ಬುದ್ಧಿ ಇರುವವರನ್ನಾದರೂ ಪ್ರಸನ್ನತೆಯ ತರಂಗಗಳ ನೆರಳಿನಿಂದ ಶೀತಲವಾಗಿ ಮಾಡಿದ್ದೇನೆ.

7. ನಾನು ಯಾವುದೋ ಒಂದು ಗುಣವನ್ನು ಪ್ರತ್ಯಕ್ಷ ರೂಪದಲ್ಲಿ ಇಟ್ಟುಕೊಂಡಿರುವ ಕಾರಣ ಉಳಿದ ಗುಣಗಳು ಅದರೊಂದಿಗೆ ಗುಪ್ತವಾಗಿ ಇವೆ. (ಗುಣಗಳಿಗೂ ಕೂಡ ಪರಸ್ಪರ ಸಂಬಂಧವಿರುತ್ತದೆ)

8. ನಾನು ಸೇವೆಯಲ್ಲಾದರೂ, ಕಾರ್ಯಕ್ರಮಗಳಲ್ಲಾದರೂ, ಯಾವ ವಿಷಯದಲ್ಲಾದರೂ, ನನ್ನ ಹೆಸರು ಇರದಿದ್ದರೂ ಹೆಸರು-ಮಾನ್ಯತೆ- ಗೌರವಗಳಿಗೆ ಒಳಗಾಗದೆ ವಿಜಯಿ ಮಾಲೆಯಲ್ಲಿ ನನ್ನ ಹೆಸರು ನಿಗದಿಯಾಗುವ ಪುರುಷಾರ್ಥವನ್ನು ಮಾಡಿದ್ದೇನೆ. (ಅವರ ಹೆಸರು ತಂದೆಯ ಹೃದಯದಲ್ಲಿ ಕೂಡ ಇರುತ್ತದೆ).

9. ನಾನು ಡಬಲ್ ಪೂಜೆಯನ್ನು ಪಡೆಯುವ ಪೂಜ್ಯನೀಯ, ಪೂಜ್ಯ ಸ್ವರೂಪ.

10. ನಾನು ಯಾವುದು ಗೌರವ ಯಾವುದು ಅಭಿಮಾನ ಎಂದು ಪರಿಶೀಲಿಸಿಕೊಂಡು ಸದಾ ನಿರ್ಮಾಣವಾಗಿದ್ದೇನೆ.

11. ನಾನು "ಸದಾ ಆರೋಗ್ಯ ಭವ" ಎಂಬ ವರದಾನದ ವರದಾನಿ.

12. ನಾನು ತಂದೆಯೊಂದಿಗೆ ಸರ್ವ ಸಂಬಂಧಗಳನ್ನು ಅನುಭವ ಮಾಡಿಕೊಂಡಿರುವ ಬಾಲಕ್ ಸೋ ಮಾಲಿಕ್ ಮಗುವಾಗಿದ್ದೇನೆ.

13. ನಾನು ಸದಾ ಸರ್ವಪ್ರಾಪ್ತಿಗಳನ್ನು, ಸಂಬಂಧಗಳನ್ನು, ಸಾಕಾರ ಮಿಲನವನ್ನು, ನನ್ನ ವಿಧವಿಧವಾದ ವಿಚಿತ್ರ ಅನುಭವಗಳನ್ನು ನೆನಪು ಮಾಡಿಕೊಂಡು ಸಮರ್ಥತೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

14. ನಾನು ಸುಕರ್ಮಗಳನ್ನು ತಯಾರು ಮಾಡಿಕೊಂಡು ವಿಕರ್ಮಗಳನ್ನು ವಿನಾಶ ಮಾಡಿದ್ದೇನೆ.

15. ನಾನು ದಯಾ ಹೃದಯಿಯಾಗಿ ಇತರರ ವ್ಯರ್ಥ ಖಾತೆಯನ್ನು ಕೂಡ ಕಡಿಮೆ ಮಾಡಿ ಅವರಿಗೆ ತಿಳಿ ಹೇಳುವ ಶುದ್ಧ ಸೇವೆಯನ್ನು ಮಾಡಿದ್ದೇನೆ.